**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್. 82/2022**

ಸಾಕ್ಷಿಯನ್ನು ದಿಃ **05.06.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** 1, 2 **ಮತ್ತು** 4**ನೇ ಪ್ರತಿವಾದಿಯರ ಪರಃ ಶ್ರೀ**. MRH **ಪರ ಕು**. IHS **ವಕೀಲರಿಂದ**:

ಈ ದಾವೆಯಲ್ಲಿ ಹೇಳಿರುವ ಶೇ.2ರ ದಂಡದ ಬಡ್ಡಿಯನಲ್ಲು RBI ನಿಯಮಗಳಿಗೆ ವಿರುದ್ಧವಾಗಿ ಪ್ರತಿವಾದಿಯರ ಮೇಲೆ ವಿಧಿಸಿದ್ದೇವೆ ಎಂದರೆ ಸರಿಯಲ್ಲ. ನಿಯಮಗಳ ಪ್ರಕಾರ ವಿಧಿಸಿದ್ದೇವೆ. 1, 2 ಮತ್ತು 4ನೇ ಪ್ರತಿವಾದಿಯರು ಸಾಲಕ್ಕೆ ಸಂಬಂಧಿಸಿದಂತೆ ಈಗಾಗಲೇ ರೂ. 7,20,000/- ಪಾವತಿ ಮಾಡಿದ್ದಾರೆ ಎಂದರೆ ಸಂಪೂರ್ಣ ಸಾಲ ಚುಕ್ತ ಮಾಡಿಲ್ಲ. ಸಾಲ ಮತ್ತು ಅದಕ್ಕೆ ತಗಲುವ ಬಡ್ಡಿಯನ್ನು ಸೇರಿ ರೂ. 7,20,000/- ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಅನುಮತಿಗೆ ವಿರುದ್ಧವಾಗಿ ಅವರ ವಿರಜದ್ದ ಶೇಕಡಾ 10.25 ಮತ್ತು ಶೇಕಡಾ 12.75ರ ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳಿಗೆ ಪ್ರತಿವಾದಿಯರು ಒಪ್ಪಿಕೊಂಡು ಸಹಿ ಮಾಡಿದ್ದಾರೆ. ಅವಧಿ ಸಾಲಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯರ ಅನುಮತಿಗೆ ವಿರುದ್ಧವಾಗಿ ಶೇಕಡಾ 11 ಮತ್ತು ಶೇಕಡಾ 13.50 ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಒಪ್ಪಿ ಸಹಿ ಮಾಡಿದ್ದಾರೆ. ನಮ್ಮ ವಾದ ಪತ್ರದಲ್ಲಿ ಹೇಳಿರುವ ಶೇಕಡಾ 11.50 ಮತ್ತು ಶೇಕಡ 9.15ರ ಬಡ್ಡಿ ಮೊತ್ತಕ್ಕೆ ಶೇ. 2 ರ ದಂಡದ ಬಡ್ಡಿಯನ್ನು ಅವರ ಅನುಮತಿಗೆ ವಿರದ್ಧವಾಗಿ ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಬ್ಯಾರನ್ ರಿಪೇರಿ ಮತ್ತು ಪಂಪ್ ಹೌಸ್ ನಿರ್ಮಾಣಕ್ಕಾಗಿ ಪಡೆದುಕೊಂಡ ಅವಧಿ ಸಾಲಕ್ಕೆ ಪ್ರತಿವಾದಿಯರ ಅನುಮತಿಗೆ ವಿರುದ್ಧವಾಗಿ ಶೇಕಡ 13 ಮತ್ತು ಶೇಕಡ 10.65ರ ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಸಾಲದ ಷರತ್ತಿಗೆ ವಿರುದ್ಧವಾಗಿ ಸದರಿ ಸಾಲದ ಮೇಲೆ ಶೇಕಡ 3 ರ ದಂಡದ ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಕೋವಿಡ್ ಸಮಯದಲ್ಲಿ ಪ್ರತಿವಾದಿಯರಿಗೆ ನಿರೀಕ್ಷೆಯಂತೆ ಕೃಷಿಯಿಂದ ಆದಾಯ ಪಡೆಯಲು ಕಷ್ಟವಾಗಿತ್ತು ಎಂಬುದು ನಮ್ಮ ಗಮನಕ್ಕೆ ಬಂದಿದೆ ಎಂದರೆ ಸರಿ. ಪ್ರತಿವಾದಿಯರಿಗೆ ಆದಾಯಕ್ಕೆ ತೊಂದರೆಯಾಗಿತ್ತು ಎಂದು ಗೊತ್ತಿದ್ದರೂ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರ ಕೋವಿಡ್ ಸಮಯದಲ್ಲಿ

ನೀಡಿದಂತಹ ವಿನಾಯಿತಿಯ ಉಪಯೋಗವನ್ನು ಪ್ರತಿವಾದಿಯರಿಗೆ ನೀಡಿಲ್ಲ ಎಂದರೆ ನಿಯಮಗಳ ಪ್ರಕಾರ ನೀಡಬೇಕಾದ ವಿನಾಯಿತಿಯನ್ನು ನೀಡಲಾಗಿದೆ. ಕೋವಿಡ್–19 ಸಮಯದಲ್ಲಿ ಪ್ರತಿವಾದಿಯರಿಗೆ ಸಿಗುತ್ತಿದ್ದ ಸೌಲಭ್ಯಗಳನ್ನು ನೀಡಿಲ್ಲ ಮತ್ತು ಅವರ ಮೇಲೆ ದಂಡದ ಬಡ್ಡಿಯನ್ನು ವಿಧಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮೇಲೆ ನಾವು ಏರಿರುವ ಬಡ್ಡಿ ಮತ್ತು ದಂಡದ ಬಡ್ಡಿ ಸಾಲದ ಷರತ್ತುಗಳಿಗೆ ವಿರುದ್ಧವಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಅನ್ಯತಾ ಫಾಯಿದೆ ಪಡೆಯಲು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 1, 2 ಮತ್ತು 4ನೇ ಪ್ರತಿವಾದಿಯರು ಬ್ಯಾಂಕ್ ಗೆ ಕೊಡಬೇಕಾದ ಸಾಲವನ್ನು ಈಗಾಗಲೇ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ **KRG** ವಕೀಲರಿಂದಃ–

3ನೇ ಪ್ರತಿವಾದಿ ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರಿ. ಆದ್ದರಿಂದ 3ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.